

‘ಕೆಪಿಕೆ ಹಾಸ್ಪಿಟಲ್ಲು ನೆನಪಿಟ್ಕೊಳ್ಳಿ, ನಂಬರು ಡೈರಿಯಲ್ಲಿ ಬರೆದಿಟ್ಟಿದೀನಿ; ಡೈರಿ ನನ್ನ ಖಾಸ ಡ್ರಾವರ್‌ನಲ್ಲಿದೆ’ ಹಾಸಿನಿ ಹೇಳಿದ್ದು ಒಂದು ಸಾಮಾನ್ಯವಾದ ಮಾತು. ಆಚೀಚಿನವರು ಯಾರು ಕೇಳಿಸಿಕೊಂಡರೂ ಗಮನದಲ್ಲಿಡುವಂತಹದಲ್ಲ. ಆದರೆ, ಘನಶ್ಯಾಮ ತೀವ್ರ ತಲ್ಲಣಕ್ಕೊಳಗಾದ. ಹತ್ತಿರದ ಸೋಫಾದ ಮೇಲೆ ಕುಸಿದಂತೆ ಕುಳಿತು ಹಾಸಿನಿಯತ್ತ ನೋಡಿದ. ಹೂದೋಟದೆದುರಿನ ಕಿಟಕಿಯ ಪಕ್ಕ ಆರಾಮ ಕುರ್ಚಿಯಲ್ಲಿ ಒರಗಿ ಪುಸ್ತಕದಲ್ಲಿ ಕಣ್ಣೋಡಿಸುತ್ತಿದ್ದವಳ ಮುಖದಲ್ಲಿ ಯಾವ ಭಾವನೆಗಳೂ ಕಾಣಲಿಲ್ಲ. ಅವಳೆ ಕ್ಷಣ ಹಿಂದೆ ಯಾವುದೋ ಮಾತಾಡಿದ್ದಕ್ಕೆ ಉತ್ತರದ ನಿರೀಕ್ಷೆಯಲ್ಲಿರುವ ಯಾವ ಸೂಚನೆಯೂ ಅಲ್ಲಿರಲಿಲ್ಲ. ಆದರೆ, ತನ್ನ ನರನಾಡಿಗಳಲ್ಲಿ ಯಾವ್ಯಾವುದೊ ಹಾರ್ಮೋನುಗಳು ಲಗ್ಗೆಯಿಟ್ಟು ಎದೆ ಸಿಡಿಯುವಂತೆ ಹೊಡೆದುಕೊಳ್ಳುತ್ತ ಪೆಟ್ಟಿಗೆಯೊಳಗೊಂದು ಪೆಟ್ಟಿಗೆ ಅದರೊಳಗಿನ್ನೊಂದು ಮತ್ತೊಂದು... ಹೀಗೇ ಕೀಲಿ ತೆಗೆದುಕೊಳ್ಳುತ್ತ ಅದಲ್ಲಿಗೇ ಹೋಗಿ ಮುಟ್ಟಿ ತೀವ್ರ ಕ್ಷೋಭೆಯಲ್ಲಿ ಬಸವಳಿಯುವ ಅನುಭವ ಮತ್ತೆ ಆಗುತ್ತಿದೆ. ‘ಯಾಕ್ರೀ... ಫ್ಯಾಕ್ಟರಿಗೆ ಹೋಗಲ್ವ?’ ಅವಳಿಂದಲೇ ಮಾತು ಬಂತು. ತನ್ನನ್ನ ಕಿರುಗಣ್ಣಲ್ಲಿ ಗಮನಿಸುತ್ತಿದ್ದಳಾ ಅನಿಸಿ ನೋಡಿದರೆ ಅವಳ ಮುಖ ಪುಸ್ತಕದ ಕಡೆ ಇತ್ತು. ಎದ್ದು ಒಳಗೆ ಹೋದ. ಊಟದ ಟೇಬಲ್ ಮೇಲೆ ಇಡ್ಲಿ ತಟ್ಟೆಯಿಟ್ಟು ಇಡ್ಲಿಯ ಮೇಲೆ ಎರಡು ಚಮಚೆ ತುಪ್ಪ ಬಡಿಸಿದ ಅಂಬಾಬಾಯಿ ಕಾಫಿ ತಂದಿಟ್ಟು ಒಳಹೋದಳು. ಕಾಫಿಯ ಪರಿಮಳಕ್ಕೆ ಮಸ್ತಿಷ್ಕದಲ್ಲಿ ಪಟ್ಟು ಹಾಕಿದ್ದ ಬಿಗಿ ಅಷ್ಟಿಷ್ಟು ಬಿಡುಗಡೆಯಾಗುತ್ತಿರುವ ಹಿತಕ್ಕೆ ಕಾಫಿಯನ್ನೆ ಮೊದಲು ಕುಡಿಯಬೇಕೆನ್ನಿಸಿ ಎತ್ತಿಕೊಂಡ. ‘ಮೊದಲು ತಿಂಡಿ ತಿನ್ನಬಾರದಾ? ನಿಮಗೆ ಪಿತ್ತ ಆಗುತ್ತೆ. ಗೊತ್ತಿದ್ದೂ...’ ಕುರ್ಚಿಯಲ್ಲಿದ್ದರೇನಾಯಿತು ಅಲ್ಲಿಂದಲೆ ತನ್ನ ಚಲನವಲನದ ಮೇಲೆ ಕಣ್ಣು. ಈಗ ಅಂತ ಅಲ್ಲ, ಇವಳು ಮೊದಲಿಂದಲೂ ಹಾಗೆ. ಮೂಲೆಮೂಲೆಯಲ್ಲಿ ಏನು ನಡೆಯುತ್ತಿದೆ ಅನ್ನುವುದು ಲಕ್ಷ್ಯದಲ್ಲಿರುತ್ತಿತ್ತು. ಯಜಮಾನಿ ಅಂದರೆ ಯಜಮಾನಿಯೆ. ನಿಟ್ಟುಸಿರು ಬಿಟ್ಟ ಘನಶ್ಯಾಮ ಇಡ್ಲಿಗೆ ಕೈ ಹಾಕಿದ. ಹೃದಯಕ್ಕೆ ಹತ್ತಿರದವರು ನಮ್ಮ ವಿಷಯದಲ್ಲಿ ಕಾಳಜಿ ವಹಿಸಿದರೆ ಹಿತವೆನಿಸುತ್ತದೆ. ಒಳಗೇನೋ ಮಿಳಿಯುತ್ತದೆ. ತನಗೆ ಬದುಕಿನಲ್ಲಿ ಅಂತಹ ಕ್ಷಣಗಳು ಅಸಂಖ್ಯಾತ ಕಾಣುತ್ತವೆ ಎಣಿಸಿದರೆ. ಆದರೆ,